# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 98
2. ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್.
3. ಉತ್ತರಿಸ ಬೇಕಾದ ದಿನಾಂಕ : 04.03.2025
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನ ಕೊಳಚೆ ನೀರನ್ನು ಸಂಸ್ಕರಿಸಿ ಕೋಲಾರ ಜಿಲ್ಲೆಯ ಕೆರೆಗಳಿಗೆ ಹರಿಸುವ ಕೆ.ಸಿ.ವ್ಯಾಲಿ ಯೋಜನೆ ಯಾವ ಹಂತದಲ್ಲಿದೆ (ವಿವರ ನೀಡುವುದು) | ಕೆ & ಸಿ ವ್ಯಾಲಿ ಮೊದಲನೇ ಹಂತದ ಕಾಮಗಾರಿಯನ್ನು ದಿನಾಂಕ:16.07.2016 ರಂದು ಪ್ರಾರಂಭಿಸಿ ದಿ: 31.12.2019ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಯೋಜನೆಯನ್ನು ದಿನಾಂಕ: 02-06-2018 ರಂದು ಪ್ರಾಯೋಗಿಕವಾಗಿ ಚಾಲನೆ ಮಾಡಲಾಗಿರುತ್ತದೆ.<br><br>ಪ್ರಸ್ತುತ ಯೋಜಿತ 126 ಕೆರೆಗಳ ಜೊತೆಗೆ ಯೋಜನೆಯ ಅನುಷ್ಠಾನದ ನಂತರ ಹೆಚ್ಚುವರಿಯಾಗಿ 12 ಕೆರೆಗಳು ಹಾಗೂ ಇದರೊಂದಿಗೆ ಹೊಸಕೋಟೆ ತಾಲ್ಲೂಕಿನ 5 ಕೆರೆಗಳನ್ನು ಸೇರಿ, ಒಟ್ಟು 143 ಕೆರೆಗಳಾಗಿರುತ್ತವೆ. ಪ್ರಸ್ತುತ 143 ಕೆರೆಗಳಿಗೆ (12.30 ಟಿ.ಎಂ.ಸಿ.) ಮತ್ತು 133 ಚೆಕ್‌ಡ್ಯಾಂ (1.20 ಟಿ.ಎಂ.ಸಿ.) ಗಳಿಗೆ ಒಟ್ಟು 13.50 ಟಿ.ಎಂ.ಸಿ. ನೀರನ್ನು ಏತ ನೀರಾವರಿ ಮೂಲಕ ಪಂಪ್ ಮಾಡಿ ಪೂರ್ಣ ಪ್ರಮಾಣದಲ್ಲಿ ತುಂಬಿಸಲಾಗಿರುತ್ತದೆ.<br><br>ಗುತ್ತಿಗೆ ಕರಾರಿನಂತೆ, ಗುತ್ತಿಗೆದಾರರು ಈ ಯೋಜನೆಯ 5 ವರ್ಷಗಳ ನಿರ್ವಹಣೆ ಮತ್ತು ಪೋಷಣೆಯನ್ನು ನಿರ್ವಹಿಸಿರುತ್ತಾರೆ.<br>ಮುಂದಿನ 5 ವರ್ಷಗಳ ನಿರ್ವಹಣೆ ಮತ್ತು ಪೋಷಣೆಗಾಗಿ ಪ್ರಸ್ತಾವನೆಯನ್ನು ಸರ್ಕಾರದಿಂದ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿರುತ್ತದೆ.<br><br>ಪ್ರಸ್ತುತ ಸಂಸ್ಕರಣಾ ಘಟಕಗಳಿಂದ ಯೋಜಿತ 400 ಎಂ.ಎಲ್.ಡಿ.ಗಳ ಪೈಕಿ ಲಭ್ಯವಾಗುತ್ತಿರುವ 280 ಎಂ.ಎಲ್.ಡಿ. ನೀರನ್ನು ದಿನಂಪ್ರತಿ ಪಂಪ್ ಮಾಡಲಾಗುತ್ತಿರುತ್ತದೆ. |
| ಆ) | ಈ ಯೋಜನೆಯಡಿಯಲ್ಲಿ ಏತ ನೀರಾವರಿ ಮುಖಾಂತರ ಆನೇಕಲ್ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ; (ವಿವರ ನೀಡುವುದು) | ಈ ಯೋಜನೆಯಿಂದ ಆನೇಕಲ್ ತಾಲ್ಲೂಕಿನ ಕೆರೆಗಳನ್ನು ತುಂಬಿಸಲು ಯೋಜಿಸಿರುವುದಿಲ್ಲ. |
| ಇ) | ಆನೇಕಲ್ ತಾಲ್ಲೂಕಿನಲ್ಲಿ ಸುಮಾರು ಕೆರೆಗಳಿಗೆ ನೀರು ತುಂಬಿಸಲಾಗದೇ ಇರಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ನಗರ ಕೆ ಮತ್ತು ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ 69 ಕೆರೆಗಳ (ಬೆಂಗಳೂರು ಪೂರ್ವ ತಾಲೂಕಿನ 3 ಕೆರೆಗಳು, ಕನಕಪುರ ತಾಲೂಕಿನ 2 ಕೆರೆಗಳು ಹಾಗೂ ಆನೇಕಲ್ ತಾಲೂಕಿನ 64 ಕೆರೆಗಳು) ಪೈಕಿ 47 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಇನ್ನುಳಿದ 22 ಕೆರೆಗಳಿಗೆ ನೀರು ತುಂಬಿಸಬೇಕಾಗಿರುತ್ತದೆ.<br><br>ಸದರಿ 22 ಕೆರೆಗಳ ಪೈಕಿ, ಇದರಲ್ಲಿ ಆನೇಕಲ್ ವ್ಯಾಪ್ತಿಗೆ ಬರುವ 19 ಕೆರೆಗಳಿಗೆ ಹಾದುಹೋಗುವ ಪೋಷಕ ಕಾಲುವೆಗಳು |

| | | |
|---|---|---|
| | | ಒತ್ತುವರಿಯಾಗಿರುವುದರಿಂದ ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಿರುವುದಿಲ್ಲ. ಈ ಪೈಕಿ ಪ್ರಸ್ತುತ ಮೂರು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ 16 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಕಂದಾಯ ಇಲಾಖೆಯ ಸಹಕಾರದೊಂದಿಗೆ ಒತ್ತುವರಿ ತೆರವುಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಇಲಾಖೆಯು ಕೈಗೊಂಡಿದ್ದು, ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿ, ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |
| ಈ) | ಕೆ.ಸಿ.ವ್ಯಾಲಿ ಯೋಜನೆಯಡಿ ಎಷ್ಟು ಕಿ.ಮೀ. ಉದ್ದದ ಕಾಲುವೆ ನಿರ್ಮಿಸಲಾಗಿದೆ; | ಈ ಯೋಜನೆಯಡಿ ಯಾವುದೇ ಹೊಸದಾಗಿ ಕಾಲುವೆಯನ್ನು ನಿರ್ಮಿಸಿರುವುದಿಲ್ಲ. ಆದರೆ, ಈ ಯೋಜನೆಯಲ್ಲಿ ಮುಖ್ಯವಾಗಿ ಹಾಲಿ ಇರುವ ಸ್ವಾಭಾವಿಕ ನಾಲೆಗಳ ಮೂಲಕ ಒಂದು ಕೆರೆಯಿಂದ ಮತ್ತೊಂದು ಕೆರೆಯನ್ನು ತುಂಬಿಸಲು ಯೋಜಿಸಲಾಗಿರುತ್ತದೆ. |
| ಉ) | ಈ ಯೋಜನೆಡಿಯಲ್ಲಿ ಐತ ನೀರಾವರಿ ಮುಖಾಂತರ ಆನೇಕಲ್ ವ್ಯಾಪ್ತಿಯ ಕೆರೆಗಳಿಗೆ ಯಾವ ಕಾಲಮಿತಿಯೊಳಗೆ ನೀರು ತುಂಬಿಸಲಾಗುವುದು? (ಸಂಪೂರ್ಣ ವಿವರ ನೀಡುವುದು). | ಈ ಯೋಜನೆಯಿಂದ ಆನೇಕಲ್ ತಾಲ್ಲೂಕಿನ ಕೆರೆಗಳನ್ನು ತುಂಬಿಸಲು ಯೋಜಿಸಿರುವುದಿಲ್ಲ.<br><br>ಆದರೆ, ಮೇಲೆ (ಇ) ರಲ್ಲಿ ತಿಳಿಸಿರುವಂತೆ, ಬೆಂಗಳೂರು ನಗರ, ಕೆ&ಸಿ ವ್ಯಾಲಿಯ ಸಂಸ್ಕರಣಾ ಘಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಐತ ನೀರಾವರಿ ಯೋಜನೆಯಡಿಯಲ್ಲಿ 69 ಕೆರೆಗಳ (ಬೆಂಗಳೂರು ಪೂರ್ವ ತಾಲೂಕಿನ 3 ಕೆರೆಗಳು, ಕನಕಪುರ ತಾಲೂಕಿನ 2 ಕೆರೆಗಳು ಹಾಗೂ ಆನೇಕಲ್ ತಾಲೂಕಿನ 64 ಕೆರೆಗಳು) ಪೈಕಿ 47 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದ್ದು ಹಾಗೂ ಇನ್ನುಳಿದ 22 ಕೆರೆಗಳಿಗೆ ನೀರು ತುಂಬಿಸಬೇಕಾಗಿರುತ್ತದೆ.<br><br>ಸದರಿ 22 ಕೆರೆಗಳ ಪೈಕಿ, ಇದರಲ್ಲಿ ಆನೇಕಲ್ ವ್ಯಾಪ್ತಿಗೆ ಬರುವ 19 ಕೆರೆಗಳಿಗೆ ಹಾದುಹೋಗುವ ಪೋಷಕ ಕಾಲುವೆಗಳು ಒತ್ತುವರಿಯಾಗಿರುವುದರಿಂದ ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಿರುವುದಿಲ್ಲ. ಈ ಪೈಕಿ ಪ್ರಸ್ತುತ ಮೂರು ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದ್ದು, ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ 16 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಕಂದಾಯ ಇಲಾಖೆಯ ಸಹಕಾರದೊಂದಿಗೆ ಒತ್ತುವರಿ ತೆರವುಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಇಲಾಖೆಯು ಕೈಗೊಂಡಿದ್ದು, ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಿ, ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು. |

ಕಡತ ಸಂಖ್ಯೆ: MID 03 LCQ 2025

(ಎನ್.ಎಸ್ ಭೋಸರಾಜು)
ಸಣ್ಣ ನೀರಾವರಿ, ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು